ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 6, January-February 2024, Pp.107 - 110
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ರಾಣಿ ತಿಮ್ಮಿಯ ಸಿಂಹಾಸನ

**ಡಾ. ತ್ರಿವೇಣಿ**
ಸಹ ಪ್ರಾಧ್ಯಾಪಕರು, ಶ್ರೀ ಡಿ.ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು.

***Abstract:***
*ಸ್ತ್ರೀವಾದಿ ಆಲೋಚನಾಕ್ರಮವು ಕನ್ನಡದ ಸಂದರ್ಭದಲ್ಲಿ ಚಿಗುರೊಡೆಯುತ್ತಿದ್ದ ಕಾಲಘಟ್ಟದಲ್ಲಿ, ತಮ್ಮ ಬದುಕು ಮತ್ತು ಬರಹಗಳ ಮೂಲಕ ಸ್ತ್ರೀವಾದಕ್ಕೆ ಬುನಾದಿಯನ್ನು ಹಾಕಿದವರು ಡಾ. ವಿಜಯಾ ದಬ್ಬೆ ಅವರು. ಲಿಂಗ ಅಸಮಾನತೆಯ ವಿರುದ್ಧ ದಿಟ್ಟವಾಗಿ ದನಿ ಎತ್ತಿದ ಇವರು ಲಿಂಗಸಂಬಂಧೀ ತರತಮಗಳಿಂದ ಮಹಿಳೆಯು ಹೊರಬರುವ ದಾರಿಯನ್ನು ಕುರಿತಾಗಿ ಖಚಿತ ನಿಲುವು ಹಾಗೂ ವೈಜ್ಞಾನಿಕ ದೃಷ್ಟಿಕೋನವನ್ನು ಒದಗಿಸಿದರು. ಡಾ.ವಿಜಯಾ ದಬ್ಬೆಯವರು ಕಾವ್ಯ, ಸಂಶೋಧನೆ, ವಿಮರ್ಶೆ, ಅಂಕಣ ಬರಹ, ಪ್ರವಾಸ ಕಥನ ಮುಂತಾದ ಪ್ರಕಾರಗಳಲ್ಲಿ ಇಪ್ಪತ್ತಕ್ಕಿಂತಲೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಇವರ ಅತ್ಯಂತ ಪ್ರಮುಖವಾದ ಕವಿತೆಗಳಲ್ಲಿ "ರಾಣಿ ತಿಮ್ಮಿಯ ಸಿಂಹಾಸನ"ವೂ ಒಂದಾಗಿದೆ.*

***Keywords:*** *ಸ್ತ್ರೀವಾದಿ, ವಿಜಯಾ ದಬ್ಬೆ, ರಾಣಿ ತಿಮ್ಮಿಯ ಸಿಂಹಾಸನ.*

**ಪೀಠಿಕೆ**

ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿದ್ದು, ಅಧ್ಯಾಪನದೊಟ್ಟಿಗೆ ಸಮಾನಮನಸ್ಕರೊಂದಿಗೆ ಸೇರಿ ಸಮತಾ ವೇದಿಕೆ, ಸಮತಾ ಅಧ್ಯಯನ ಕೇಂದ್ರಗಳನ್ನು ಕಟ್ಟುವ ಮೂಲಕ ಅಕಡೆಮಿಕ್ ವಲಯದಲ್ಲಿ ಸ್ತ್ರೀವಾದಿ ಚಿಂತನಾಕ್ರಮಕ್ಕೆ ಚಾಲನೆ ನೀಡಿದವರು. "ಎಪ್ಪತ್ತರ ದಶಕದಲ್ಲಿ ಕನ್ನಡ–ಕರ್ನಾಟಕಗಳಲ್ಲಿ ಮಹಿಳಾವಾದವನ್ನು ರೂಪಿಸಿದ, ಹರಡಿದ ಸ್ಮರಣೀಯ ಹೆಸರು ವಿಜಯಾದಬ್ಬೆ. ಅವರು ಮಾತಾಡಿದರು,ಬರೆದರು, ಹೋರಾಡಿದರು, ಗೆದ್ದರು!"

ಕಾವ್ಯ, ಸಂಶೋಧನೆ, ವಿಮರ್ಶೆ, ಅಂಕಣ ಬರಹ, ಪ್ರವಾಸ ಕಥನ ಮುಂತಾದ ಪ್ರಕಾರಗಳಲ್ಲಿ ಇಪ್ಪತ್ತಕ್ಕಿಂತಲೂ ಹೆಚ್ಚು ಕೃತಿಗಳನ್ನು ಡಾ.ವಿಜಯಾ ದಬ್ಬೆಯವರು ರಚಿಸಿದ್ದಾರೆ. ಇವರ ಅತ್ಯಂತ ಪ್ರಮುಖವಾದ ಕವಿತೆಗಳಲ್ಲಿ "ರಾಣಿ ತಿಮ್ಮಿಯ ಸಿಂಹಾಸನ"ವೂ ಒಂದು. ಈ ಕವಿತೆಯು 1985ರಲ್ಲಿ ಪ್ರಕಟವಾದ ಅವರ ಎರಡನೇ ಕವನ ಸಂಕಲನ ನೀರುಲೋಹದ ಚಿಂತೆಯಿಂದ ಆಯ್ಕೆ ಮಾಡಿರುವಂಥದ್ದು.ಕಥನ ಕವನದ ಸ್ವರೂಪದಲ್ಲಿರುವ ಈ ಕವಿತೆಯಿದು.

"ಭಾಷೆಯೊಳಗಿನ ಪರಿಕಲ್ಪನೆಗಳು, ಪ್ರತಿಮೆಗಳು, ಶಬ್ದಗಳು ಹೊಂದಿರುವ ಸಂಬಂಧವು ಅದಕ್ಕೆ ಹೊರಗಿನ ಏಜೆನ್ಸಿಯಾದ ಅವಳ ಮೂಲಕ ಅರ್ಥ ಹೊಂದುವುದಿಲ್ಲ. ಸ್ಥಾಪಿತ ಭಾಷಾ ವ್ಯವಸ್ಥೆಯೊಳಗೇ ಮಹಿಳೆಯು ಇರುತ್ತಾಳೆ. ಆ ಭಾಷೆಯನ್ನೇ ತನ್ನನ್ನು, ತನ್ನ ನಿಜವನ್ನು ವ್ಯಕ್ತಗೊಳಿಸಲು ಮುರಿದು ಕಟ್ಟುವುದೇ ಆಕೆಗೆ ಇರುವ ದಾರಿ." ಪುರುಷ ಪ್ರಜ್ಞೆ ಸದಾ ಹೆಣ್ಣಿನ ಸ್ವಭಾವ, ನಡವಳಿಕೆ, ಶಕ್ತಿ ಮತ್ತು

***Please cite this article as:*** ತ್ರಿವೇಣಿ. (2024). ರಾಣಿ ತಿಮ್ಮಿಯ ಸಿಂಹಾಸನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 2(6), 107–110.

ಪಾತ್ರಗಳನ್ನು ತನ್ನ ನೆಲೆಯಿಂದ ನಿರ್ಣಯಿಸಿ, ಅದಕ್ಕನುಗುಣವಾಗಿ ಅವಳ ಬದುಕು ರೂಪಿತವಾಗಬೇಕೆಂದೇ ಬಯಸುತ್ತದೆ ಮತ್ತು ಒತ್ತಾಯಿಸುತ್ತದೆ. ಇಂತಹ ಮನೋಧರ್ಮದ ಹಿಂದಿರುವ ಪುರುಷಶಾಹೀ ಧೋರಣೆಯನ್ನು ಈ ಕವಿತೆ ಸಮರ್ಥವಾಗಿ ತೆರೆದಿಡುತ್ತದೆ.

*ನಮ್ಮೂರ*
*ಬಂಡೆ ಬಂಡೆಯ ಮೇಲೆ*
*ಪ್ರಗತಿಪಂಥದ ಹಾಡು.*
*ಇಲ್ಲಿಯ ನಾಯಿ ನರಿಗಳೂ*
*ಸಮಾನತೆಯಿಂದ ಬೊಗಳುತ್ತವೆ.*
*ಹೀಗೆ ಕವಿತೆ ಆರಂಭವಾಗುತ್ತದೆ.*

ಊರಿನ ಬಂಡೆ ಬಂಡೆಯ ಮೇಲೂ ಪ್ರಗತಿಪಂಥದ ಹಾಡು ಕೆತ್ತಲ್ಪಟ್ಟಿವೆ. ಇಲ್ಲಿ ನಾಯಿ ನರಿಗಳೆಲ್ಲ ಸಮಾನತೆಯ ಹೆಸರು ಹೇಳಿಕೊಂಡು ಕಿರುಚುತ್ತಿವೆ ಅಷ್ಟೇ. ನಿಜವಾದ ಕಾಳಜಿ ಇಲ್ಲದ ಬರೀ ತೋರಿಕೆಯ ಮಾತುಗಳು ವಿಜೃಂಭಿಸುತ್ತಿರುವ ಪರಿಯನ್ನು ಕವಯತ್ರಿ ಇಲ್ಲಿ ಮೊನಚಾದ ವಿಡಂಬನೆಯಲ್ಲಿ ಕಟ್ಟಿಕೊಡುತ್ತಾರೆ.

*ಎಲ್ಲ ಕ್ರಾಂತಿಯನ್ನೂ*
*ಹೊದ್ದು ಮಲಗಿದ*
*ಈ ಊರಿನಲ್ಲಿ*
*ನಾಟಕಕ್ಕೆ ಬೇರೆ ವೇದಿಕೆಯೇ?*

ಎನ್ನುವ ಸಾಲುಗಳು ಕ್ರಾಂತಿ ಕೇವಲ ಮಾತಾಗಬಾರದು, ಅದು ಕ್ರಿಯೆಯಾಗಬೇಕೆನ್ನುವುದನ್ನು ಒತ್ತಾಯಿಸುತ್ತವೆ. ಆದರೆ ಇಲ್ಲಿ ಕ್ರಾಂತಿ ಕ್ರಿಯಾತ್ಮಕವಾಗಿಲ್ಲ, ಹೊದ್ದುಕೊಂಡು ಮಲಗಿಬಿಟ್ಟಿದೆ. ಇಡೀ ಊರೇ ಹೀಗೆ ಪ್ರಗತಿ, ಕ್ರಾಂತಿ ಎಂಬ ಸೋಗಲಾಡಿತನದ ನಾಟಕವಾಡುತ್ತಿರುವಾಗ ಮತ್ತೊಂದು ನಾಟಕವಾಡಲು ವೇದಿಕೆ ಬೇಕೇ? ಎಂಬಲ್ಲಿ ಕವಯತ್ರಿಯ ವ್ಯಂಗ್ಯದ ಮೊನಚು ತಿವಿಯುತ್ತದೆ.

*ಇಂಥ ಊರಲ್ಲಿ*
*'ಬಾಳ ಪ್ರಣತಿ' ನಾಟಕದ ತಯಾರಿ*
*ಹುಡುಗರೂ ಮುದುಕರೂ ಸೇರಿ*

ಇಂತಹ ಊರಲ್ಲಿ ಆಡ ಹೊರಟಿರುವ ನಾಟಕವಾದರೂ ಎಂಥದ್ದು? ಬಾಳ ದೀವಿಗೆ ನಾಟಕ. ಹುಡುಗರಾದಿಯಾಗಿ ಮುದುಕರೆಲ್ಲರೂ .. ಇಲ್ಲಿನ ಪ್ರತಿಯೊಂದು ಪದವೂ ವಾಸ್ತವಕ್ಕೂ ನಡತೆಗೂ ಇರುವ ವೈರುದ್ಯವನ್ನು ಎತ್ತಿ ತೋರುತ್ತವೆ.

*ಈ ನಾಟಕದೊಳಗಿನ ಪ್ರಣತಿಗೆ*
*ಮನೆ ಮನೆಗೆ ಹೊಕ್ಕು ತಲಾಶ್ ಮಾಡಿದ್ರು*
*ರಾತ್ರಿ ಬೆಳಗು ಹುಡುಕಿದ್ರು*
*ನಾಟಕದ ರಾಣಿ ನೀನೇ ಬಾ ಅಂದು*
*ತಿಮ್ಮಿ ಒಪ್ಸಿದ್ರು.*

ಅವರ ಆ ನಾಟಕದ ರಾಣಿಗೆ ಸರಿಯಾಗಿ ಹೊಂದಿಕೊಳ್ಳುವವಳು ತಿಮ್ಮಿಯೇ ಎಂಬುದು ನಮಗೆ ಹಲವು ಅರ್ಥಗಳನ್ನು ಹೊಳೆಯಿಸುತ್ತದೆ.

*ತಿಮ್ಮೀಗೆ*
*ಇಂಥ ಖಯಾಲಿ ಬಾಳ.*
*ಯಾರಾರು ಗಾಳಿ ಹಾಕಿದ್ರಂತೂ*
*ತೀರೇ ಹೋಯ್ತು*

ಎಲ್ಲರೂ ಉಬ್ಬಿಸಿದ್ದಕ್ಕೆ ಸಂತೋಷಗೊಂಡ ತಿಮ್ಮಿ ಮುಗ್ಧ ಹೆಣ್ಣಿನ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿದಂತಿದ್ದಾಳೆ. ತಾನು ಹೊರಬರುವ, ತನ್ನತನವನ್ನು ತೆರೆದಿಡುವ ಸಣ್ಣ ಅವಕಾಶ ಸಿಕ್ಕರೂ ಸಮರ್ಥವಾಗಿ ಬಳಸಿಕೊಳ್ಳಬಲ್ಲಳು.

*ನಾಟಕದಾಗೆ*
*ನೀನೆ ಜೀವ ಅಂತ*
*ಹತ್ತು ಮಂದಿ ಹೇಳಿದ್ರೆ*
*ರಾಜಾಪಾರ್ಟೂ ಕಾಲಿಗೆ ಬಿದ್ರೆ*
*ಯಾರಿಗೆ ಮೋಜಲ್ಲ?*

ತನ್ನ ನಿಜ ಬದುಕಲ್ಲಿ ತಾನು ಕಾಣಲು ಸಾಧ್ಯವಾಗದ ಬೆಲೆ ಅವಳಿಗೆ ದೊರೆತರೆ ಕೇಳಬೇಕೆ? ಅವಳ ಅಸ್ಥಿತ್ವಕ್ಕೆ ಬೆಲೆ ದೊರೆತಿದ್ದಕ್ಕೆ ತಿಮ್ಮಿ ಹಿಗ್ಗಿ ಹೀರೆಯಾದಳು. ಅದರಲ್ಲೂ ಒಬ್ಬ ಗಂಡಸು ತನ್ನನ್ನು

ಓಲೈಸುತ್ತಾನೆಂಬುದ ತಿಳಿದ ಅವಳ ಆನಂದಕ್ಕೆ ಪಾರವೇ ಇಲ್ಲ.

*ಈ ರಾಣಿಗೆ*
*ಸಿಂಹಾಸನ ಕಿರೀಟ*
*ಎಲ್ಲಾ ಆಯ್ತು.*
*ತಾಲಿಂ ಮಾಡ್ತಾ ಮಾಡ್ತಾ*
*ತಾನೇ ರಾಣಿ ಅನ್ನುಸ್ತು,*
*ಪ್ರೀತಿ ಉಕ್ಕಿಸಿದ್ಹಂಗೆ*
*ನಾಟಕದ ರಾಜ*
*ಹಾಡ್ತಾ ಹಾಡ್ತಾ ಇದ್ರೆ*
*ಗಾಳೀಲಿ ತೇಲಿದ್ಹಂಗಾಯ್ತು*

ಎಂದೂ ದೊರೆಯದ ಮಹತ್ವ ಅವಳಿಗೆ ದೊರೆತದ್ದು, ನಾಟಕವಾದರೂ ತಾನು ಕಂಡುಣ್ಣದ ಪ್ರೀತಿಯ ಸೆಲೆ ಸಿಕ್ಕಿದ್ದು ಅವಳಿಗೆ ಹೊಸ ಲೋಕವೇ ಕಂಡಂತಾಯ್ತು. ಇಲ್ಲಿರುವುದೂ ಸಾಚಾ ಪ್ರೀತಿಯಲ್ಲದೇ ಹೋದರೂ ಇಂತದ್ದನ್ನು ಕಾಣದ ಹೃದಯ ಅತೀವ ಆನಂದವನ್ನೇ ಪಡೆಯಿತು.

*ಹಿಟ್ಟು ತಿರುವಿ*
*ಮಕ್ಳನ್ ಮಲಗ್ಸಿ*
*ಗಂಡನ್ನೊಪ್ಸಿ*
*ಹರಿದಿದ್ ಸೀರೆ ಗಂಟು ಬಿಕ್ಕಂಡು*
*ತಾಲೀಮಿಗೆ ಬಂದದ್ದೇ*
*ಕನಸಾಗ್ಹೋಯ್ತು*

ಮನೆಗೆಲಸವನ್ನೂ ಸಂಬಾಳಿಸುತ್ತಲೇ ಅನಂತ ಕನಸುಗಾರಿಕೆಯೊಂದಿಗೆ ತಿಮ್ಮಿ ತಾಲೀಮಿಗೆ ಹೊರಡುತ್ತಾಳೆ. ತನಗೆ ದಕ್ಕಿದ ಅವಕಾಶವನ್ನು ಸದ್ಬಳಕೆ ಮಾಡಿಕೊಳ್ಳಬಲ್ಲ ಛಾತಿಯವಳು ಈಕೆ.

*ನಾಟಕ ಮಾಡೋ ದಿನ ಬಂತು*
*ನಾಡಕದ ರಾಜನ್ನ ಕಣ್ಣಾಗ್ ನುಂಗಿ*
*ನಾಟಕದಾಗೆ ಮಾಡಿದ್ರೆ ಇಕಾ ನೋಡು*
*ಅಂದ ತಿಮ್ಮೀಗೆ ಅವಳ್ಗಂಡ*

ಹೆಣ್ಣನ್ನು ನೋಡುವ ಪುರುಷ ಕ್ರಮವನ್ನು ಈ ಸಾಲುಗಳು ಚಿತ್ರಿಸುತ್ತವೆ. ಪುರುಷ ಪ್ರಜ್ಞೆ ಸದಾ ಅವಳ ದೇಹ– ಸ್ವಭಾವ– ಶಕ್ತಿ ಮತ್ತು ಪಾತ್ರಗಳನ್ನು ತಾನೇ ನಿರ್ಣಯಿಸಿ ಅದಕ್ಕನುಗುಣವಾಗಿಯೇ ಅವಳ ಬದುಕು ರೂಪಿತವಾಗಬೇಕೆನ್ನುವುದನ್ನು ಒತ್ತಾಯಿಸುತ್ತದೆ. ಇಲ್ಲಿ ತಿಮ್ಮಿಯ ಗಂಡನಿಗೆ ಇಷ್ಟೂ ದಿನ ಅವಳು ಪಟ್ಟ ಶ್ರಮ, ಅವಳ ಆಸೆಗಣ್ಣು, ಹರಿದು ಗಂಟು ಬಿಗಿದ ಸೀರೆ ಇದಾವುದೂ ಕಾಣುವುದೇ ಇಲ್ಲ. ಅವಳ ದೇಹದ ಮೇಲೇ ತನ್ನದೇ ಸ್ವಾಮ್ಯವಿರಬೇಕೆಂಬ ಧೋರಣೆಯೇ ಪ್ರಬಲವಾಗುತ್ತದೆ. ತನ್ನ ಹೆಂಡತಿ ಪರ ಪುರುಷನೊಟ್ಟಿಗೆ ನಾಟಕದಲ್ಲೂ ಕಾಣಿಸಿಕೊಳ್ಳುವುದ ಆತ ಸಹಿಸಲಾರ. ನಾಟಕದಾಗೆ ಮಾಡಿದ್ರೆ ಇಕಾ ನೋಡು – ಎಂಬಷ್ಟೇ ಮಾತು ಸಾಕು ಅವಳನ್ನು ಹತೋಟಿಯಲ್ಲಡಲು. ಅದರಾಚೆಗೆ ಚಿಂತಿಸಿದರೆ ಅವಳಿಗೆ ಬದುಕೇ ಇಲ್ಲ.

*ಕಿರೀಟ ಬಿದ್ಹೋಗಿ*
*ಬಣ್ಣ ಕರಗ್ಹೋಗಿ*
*ಕನಸು ಒಡೆದ್ಹೋಗಿ*
*ಇಲ್ಲ ಮಾಡ್ತೀನಿ ಅಂದ್ಲು*
*ನಾನು ರಾಣಿಯಾಗ್ತೀನಿ ಅಂದ್ಲು*

ನಾಟಕದ ಪಾರ್ಟು ಮಾಡ್ತಾ ತಾನೇ ರಾಣಿ ಎಂಬಂತಿದ್ದ ತಿಮ್ಮಿಗೆ ಕನಸೆಲ್ಲಾ ಒಡೆದು ಹೋಯ್ತು. ಎಲ್ಲವೂ ಕರಗಿಹೋಯ್ತು. ತನ್ನ ಅಧಿನವೇ ಅವಳ ಬದುಕು ಎಂದುಕೊಂಡ ಪುರುಷನಿಂದ ಹೆಣ್ಣಿನ ಅಸ್ಮಿತೆಯೇ ಕರಗಿಹೋಗುವುದು ಇಲ್ಲಿನ ವ್ಯಂಗ್ಯವಾಗಿದೆ. ಮಾಡ್ತೀನಿ ಅಂತ ಬಾಯಲ್ಲಿ ಹೇಳಿದರೂ ಅದು ಆಗಿಹೋಗದ್ದೆಂಬ ಅರಿವು ಆಕೆಗೆ ಇದ್ದೇ ಇದೆ. ಆ ಅಸಹಾಯಕತೆಯಿಂದ ನಾಟಕಕ್ಕೆ ಪ್ರಣತಿಯಾಗಿದ್ದ ತಿಮ್ಮಿ

*ಬೋರ್ಲಾಗಿ ಬಿದ್ಗಂಡು*
*ಅತ್ತಾ ಅತ್ತಾ ನಿದ್ದೆ ಹೋದ್ಲು*

ಆದರೆ ಅವಳ ಅಂತರಂಗದಲ್ಲಿನ ತುಡಿತಕ್ಕೆ ಬೇಲಿ ಹಾಕಲಾಗದು. ಕನಸಿನಲ್ಲೇ ಎಲ್ಲವನ್ನೂ ಸಾಧಿಸಿಕೊಂಡಳು.

*ಕನಸಾಗೆ*

***ನಾಟಕದ ಮೋಜೇನ್ ಹೇಳ್ಲಿ***
***ಜನರೆಲ್ಲ ರಾಣೀನೇ ನೋಡ್ತಿದಾರೆ***
***ಕೈ ಮುಗಿದು ನಿಂತಿದಾರೆ***
***ರಾಣಿ ತಿಮ್ಮಿಯ ಸಿಂಹಾಸನ***
***ಫಳಾ ಫಳಾ ಅಂತಿತ್ತು***

ಎಂದೂ ಸಿಗದ ಗೌರವ, ಮಹತ್ವ ಎಲ್ಲವೂ ತಿಮ್ಮಿಗೆ ಕನಸಿನಲ್ಲಿ ದಕ್ಕಿತು. ಅವಳ ಅಷ್ಟೂ ದಿನದ ಶ್ರಮಕ್ಕೆ ದೊರೆವ ಅಮಾನ್ಯತೆ ಅವಳನ್ನು ಕುಗ್ಗಿಸಲಿಲ್ಲ. ಆ ತಳಮಳವನ್ನು ಆಕೆ ಕನಸುಗಾರಿಕೆಯ ಮೂಲಕವೇ ಜೀವಂತವಾಗಿಟ್ಟುಕೊಳ್ಳುತ್ತಾಳೆ. ತಿಮ್ಮಿಯ ಈ ಕನಸನ್ನು, ಕನಸಿನ ಪರಿಧಿಯಲ್ಲೇ ಮುಕ್ತಾಯವಾಗಲು ಬಿಡದೆ ನನಸಾಗಿಸುವತ್ತ ಇಂದಿನ ಹೆಣ್ಣು ಮುನ್ನುಗ್ಗಬೇಕೆಂಬ ಮುಂದಿನ ಹಾದಿಯನ್ನು ಈ ಕವಿತೆ ನಮಗೆ ಮನಗಾಣಿಸುತ್ತದೆ. ಗಂಡು ಸಬಲ ಪ್ರಬಲ ಎನ್ನುವ ನಂಬಿಕೆಯ ವಿರುದ್ಧ ನಿಂತ ಪ್ರತಿರೋಧದ ಅಲೆಯಿದು. ಇಲ್ಲಿ ಅಧಿಕಾರದ ರಾಜಕಾರಣವಿದೆ. ವ್ಯಕ್ತಿ ವ್ಯಕ್ತಿಗಳ ನಡುವೆ ಇರಬೇಕಾದ ಸಮನ್ವಯವನ್ನು ಪ್ರತಿನಿಧಿಸುತ್ತಲೇ, ಹೆಣ್ಣನ್ನು ನೋಡುವ ಕ್ರಮ ಬದಲಾಗಬೇಕೆಂಬುದನ್ನು ಕವಿತೆ ಒತ್ತಾಯಿಸುತ್ತದೆ. ದೇಹದ ಮೇಲಿನ ನಿಯಂತ್ರಣದಿಂದಲೇ ಹೆಣ್ಣನ್ನು ತನ್ನ ಹಿಡಿತದಲ್ಲಿ ಇಟ್ಟುಕೊಂಡಿರುವ ವ್ಯವಸ್ಥೆಯ ವಾಸ್ತವವನ್ನು ನಮ್ಮೆದುರು ಈ ಕವಿತೆ ತೆರೆದಿಡುತ್ತದೆ. ಗಂಡಿನ ಯಜಮಾನತ್ವದ ಸ್ವರೂಪವನ್ನು ಹೇಳುತ್ತಾ ಹೆಣ್ಣು ಬದುಕಿನ ಪ್ರತಿ ತಿರುವಿನಲ್ಲೂ ನಿರ್ಧಾರ ತೆಗೆದುಕೊಳ್ಳುವ ಅಧಿಕಾರ ಚಲಾಯಿಸುವ ಗಂಡಿನ ಆಕ್ರಮಣಕಾರಿ ಮನೋಧರ್ಮವನ್ನು ಸೂಕ್ಷ್ಮವಾಗಿ ಖಂಡಿಸುತ್ತದೆ

**ಕೊನೆಟಿಪ್ಪಣಿ**

1. ತಾರಾನಾಥ, ಎನ್. ಎಸ್. (2022). ಬೆನ್ನುಡಿ, ವಿಜಯಾದಬ್ಬೆ ಸಮಗ್ರ ಸಾಹಿತ್ಯ,
2. ಸುಮಿತ್ರಾಬಾಯಿ ಬಿ. ಎನ್. (2018). ಸ್ತ್ರೀವಾದ ಒಂದು ಅವಲೋಕನಾ. ಪು. 123.

**ಪರಾಮರ್ಶನ ಗ್ರಂಥಗಳು**


- ಸಬಿಹ ಭೂಮಿ ಗೌಡ. (2006). ಮಹಿಳಾ ಸಾಹಿತ್ಯ. ಕರ್ನಾಟಕ ಸಾಹಿತ್ಯ ಅಕಾಡೆಮಿ.
- ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ. (1993). ಕರ್ನಾಟಕ ಸಾಹಿತ್ಯ ಅಕಾಡೆಮಿ.
- ಶಶಿಕಲಾ ಎಸ್ ಡಿ. (ಸಂ.) (2012). ವಿಜಯದಬ್ಬೆ ಸಮಗ್ರ ಸಾಹಿತ್ಯ. ಅಪರಂಜಿ ಪ್ರಕಾಶನ.
- ಸುಮಿತ್ರಾ ಬಾಯಿ ಬಿ ಎನ್. (2018). ಸ್ತ್ರೀವಾದ ಒಂದು ಅವಲೋಕನ. ಅಹರ್ನಿಸಿ ಪ್ರಕಾಶನ.
- ತೇಜಸ್ವಿನಿ ನಿರಂಜನ. (ಸಂ.) (2014). ಸೀಮಂತಿನಿ ನಿರಂಜನ – ಸ್ತ್ರೀವಾದಿ ಸಾಹಿತ್ಯ ವಿಮರ್ಶೆ. ಅಭಿನವ ಪ್ರಕಾಶನ.